# ರೋಸ್ ಎಂಬ ಚೆಲುವೆ

■ ವೇದಾವತಿ ಹೆಚ್.ಎಸ್.



ಈಜಿಪ್ಟ್ ದೇಶದ ನೈಲ್ ನದಿಯ ದಡದಲ್ಲಿ ಕನೋಪಸ್ ಎಂಬ ನಗರವಿತ್ತು. ಅದು ಇಡೀ ಈಜಿಪ್ಟ್ ದೇಶದಲ್ಲೇ ಸುಂದರವಾದ ನಗರವೆಂದು ಹೆಸರುವಾಸಿಯಾಗಿತ್ತು. ಈ ನಗರದ ಸ್ವಲ್ಪ ದೂರದಲ್ಲೇ ಗ್ರೀಕರು ವಾಸ ಮಾಡುತ್ತಿದ್ದರು. ನೌಕ್ರಾತಿಸ್ ಎಂಬ ನಗರವು ಗ್ರೀಕರ ವ್ಯಾಪಾರ ಸ್ಥಳವಾಗಿತ್ತು. ನೌಕ್ರಾತಿಸ್ ನಗರದಲ್ಲಿ ದೊಡ್ಡ ದೊಡ್ಡ ಅಂಗಡಿಗಳು, ಬೆಲೆಬಾಳುವ ವಸ್ತುಗಳು, ಅಂದ ಚಂದದ ಮಹಿಳೆಯರು ಇರುವುದು ಒಂದು ರೀತಿಯಲ್ಲಿ ವಿಶೇಷವಾಗಿತ್ತು. ಬೇರೆ ಬೇರೆ ದೇಶಗಳಿಂದ ಈ ನಗರಕ್ಕೆ ಸಾಮಾನು ಸರಂಜಾಮು ಖರೀದಿಸಲು ಜನರು ಬರುತ್ತಿದ್ದರು. ನೌಕ್ರಾತಿಸ್ ನಗರದಲ್ಲಿ ಖರಾ ಎಂಬುವನು ದೊಡ್ಡ ವ್ಯಾಪಾರಿಯಾಗಿದ್ದನು. ಅವನು ತುಂಬಾ ಶ್ರೀಮಂತ ಮತ್ತು ಕರುಣಾಳು ಆಗಿದ್ದನು.

ಖರಾನು ಒಂದು ದಿನ ನಗರದ ಮುಖ್ಯ ಬೀದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದನು. ಅವನಿಗೆ ಅಲ್ಲೊಂದು ಜನರ ದೊಡ್ಡ ಗುಂಪೊಂದು ಕಾಣಿಸಿತು. ಅದನ್ನು ಕಂಡ ಖರಾನು ಕುತೂಹಲದಿಂದ ಗುಂಪಿನ ಬಳಿಗೆ ಹೋದನು. ಅದೊಂದು ಗುಲಾಮರನ್ನು ಮಾರುವ ಸ್ಥಳವಾಗಿತ್ತು. ಅಲ್ಲೊಬ್ಬ ದಢೂತಿ ದೇಹದ ಎತ್ತರದ ಮನುಷ್ಯನು ನಿಂತಿದ್ದನು. ಅವನ ಪಕ್ಕದಲ್ಲಿ ಹದಿನಾರು ವರ್ಷದ ಹುಡುಗಿಯೊಬ್ಬಳು ನಿಂತಿದ್ದಳು. ಆ ಹುಡುಗಿಯು ತುಂಬಾ ಚಲುವೆಯಾಗಿದ್ದಳು. ಅವಳ ಮುಖದಲ್ಲಿ ಇನ್ನೂ ಎಳೆತನ ಎದ್ದು ಕಾಣುತ್ತಿತ್ತು.

ಆ ಹುಡುಗಿಯನ್ನು ದಢೂತಿ ದೇಹದ ಮನುಷ್ಯನೊಬ್ಬನು ಎಲ್ಲರೆದುರು ನಿಲ್ಲಿಸಿಕೊಂಡು ಹರಾಜು ಮಾಡುತ್ತಿದ್ದನು. ಅಲ್ಲಿ ಸೇರಿದ್ದ ಶ್ರೀಮಂತರು ಸುಂದರವಾದ ಹುಡುಗಿಯನ್ನು ಖರೀದಿಸಲು ತುದಿಗಾಲಿನಲ್ಲಿ ನಿಂತು ಹರಾಜು ಕೂಗುತ್ತಿದ್ದರು. ಖರಾ ಆ ಹುಡುಗಿಯನ್ನು ನೋಡಿದನು. ಅವನಿಗೆ ಇಷ್ಟೊಂದು ಸುಂದರವಾದ ಹುಡುಗಿಯು ಗುಲಾಮಳಾಗಿ ಮಾರಾಟವಾಗುತ್ತಿರುವುದನ್ನು ಕಂಡು ಅವಳ ಮೇಲೆ ಕರುಣೆ ಉಕ್ಕಿ ಬಂದಿತು. ಖರಾನಿಗೆ ಸಂತಾನಭಾಗ್ಯವಿಲ್ಲದ ಕಾರಣ ಸುಂದರವಾದ ಹುಡುಗಿಯ ಬಗ್ಗೆ ಕನಿಕರವುಂಟಾಯಿತು. ಅವನು ಅವಳನ್ನು ಹರಾಜಿನಲ್ಲಿ ಖರೀದಿಸಿ ತನ್ನ ಮನೆಯಲ್ಲಿ ಸಾಕಿಕೊಳ್ಳಬೇಕೆಂದು ಯೋಚಿಸಿದನು. ಖರಾನು ಹೆಚ್ಚು ಹಣಕ್ಕೆ ಹುಡುಗಿಯನ್ನು ಖರೀದಿಸಿ ಅವಳನ್ನು ಮನೆಗೆ ಕರೆದುಕೊಂಡು ಹೋದನು.

ಖರಾನ ಹೆಂಡತಿಗೆ ಹುಡುಗಿಯನ್ನು ಕಂಡು ತುಂಬ ಸಂತೋಷವಾಯಿತು. ಸುಂದರವಾದ ಹುಡುಗಿಗೆ ರೋಸ್ ಎಂದು ಪುನರ್ ನಾಮಕರಣ ಮಾಡಿದರು. ಅವರಿಬ್ಬರು ರೋಸ್ ತಮ್ಮ ಸ್ವಂತ ಮಗಳು ಎಂಬಂತಯೇ ಪ್ರೀತಿಯಿಂದ ಸಾಕತೊಡಗಿದರು. ರೋಸ್ ಕೂಡ ಅವರಿಬ್ಬರನ್ನು ತನ್ನ ತಂದೆ ತಾಯಿ ಎಂದೇ ತಿಳಿದು ಸೇವೆ ಮಾಡುತ್ತಿದ್ದಳು.

ಖರಾನು ತುಂಬಾ ಶ್ರೀಮಂತನಾಗಿದ್ದರಿಂದ ಅರಮನೆಯಂತಹ ಭವ್ಯ ಮಹಲನ್ನು ಕಟ್ಟಿಸಿದ್ದನು. ಸುಂದರವಾದ ಉದ್ಯಾನವನವನ್ನು ಹೊಂದಿದ್ದು, ಅಲ್ಲದೇ ಅಮೃತಶಿಲೆಯಿಂದ ಈಜುಕೊಳವನ್ನು ಕಟ್ಟಿಸಿದ್ದನು. ರೋಸ್ ಈಗ ರಾಜಕುಮಾರಿಯಂತೆ ಸಂತೋಷದಿಂದ ಪೋಷಕರ ಜೊತೆಯಲ್ಲಿದ್ದಳು. ಅವಳು ಯಾವುದೇ ಚಿಂತೆಯಿಲ್ಲದೆ ಆನಂದವಾಗಿರುವುದನ್ನು ಕಂಡು ಖರಾ ದಂಪತಿಗಳು ನೆಮ್ಮದಿಯಾಗಿದ್ದರು.

ಅದೊಂದು ದಿನ ರೋಸ್ ತನ್ನ ಗೆಳತಿಯರೊಂದಿಗೆ ಈಜುಕೊಳದಲ್ಲಿ ಸಂತೋಷದಿಂದ ಈಜಾಡುತ್ತಿದ್ದಳು.ಹೀಗಿರುವಾಗ ಜೋರಾಗಿ ಗಾಳಿ ಬೀಸತೊಡಗಿತು.ಗರುಡ ಪಕ್ಷಿಯೊಂದು ತನ್ನ ರಕ್ಕೆಗಳನ್ನು ಬಡಿಯುತ್ತಾ ಆಕಾಶದಿಂದ ಹಾರಿ ಬಂದು ರೋಸ್ ಈಜುತ್ತಿದ್ದ ಕೊಳದ ಹತ್ತಿರಕ್ಕೆ ಬಂದಿತು.